# ಸೇವೆಯ ಶ್ರೀಸಂದೇಶ

ಡಾ. ಸಿ. ಪಿ. ಕೃಷ್ಣಕುಮಾರ್

ಭಾರತದ ಇತಿಹಾಸದಲ್ಲಿ ಮೇ ೧, ರಾಮಕೃಷ್ಣ ಮಿಷನ್ ಸ್ಥಾಪಿತವಾದ ಒಂದು ಪರ್ವ ದಿನ. ೧೮೯೭ರ ಮೇ ೧ರಂದು, ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್ನನ್ನು ವಿಧಿಪೂರ್ವಕವಾಗಿ ಉದ್ಘಾಟಿಸಿ, ಅದರ ಸೇವಾದೀಕ್ಷೆಗೆ ಹೊಸ ಚಾಲನೆ ಇತ್ತರು. ಪ್ರಸಕ್ತ ಲೇಖನದಲ್ಲಿ ಈ ಸೇವಾದರ್ಶದ ನೆಲೆಗಳನ್ನು ಗುರುತಿಸುವ ಒಂದು ಅಪೂರ್ವ ಪ್ರಯತ್ನವನ್ನು ಕನ್ನಡದ ಹೆಸರಾಂತ ಸಾಹಿತಿಗಳೂ, ವಿಶ್ರಾಂತ ಕನ್ನಡ ಪ್ರಾಧ್ಯಾಪಕರೂ, ರಾಮಕೃಷ್ಣ ವಿವೇಕಾನಂದ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿರುವವರೂ ಆದ ಡಾ. ಸಿ. ಪಿ. ಕೃಷ್ಣಕುಮಾರರು ಮಾಡಿರುತ್ತಾರೆ.

**ಭಾರತೀಯ** ಸಮಾಜದಲ್ಲಿ ಜನಸೇವೆಗಿರುವಷ್ಟು ಅವಕಾಶಗಳು ಮತ್ತಾವ ಸಮಾಜದಲ್ಲಾದರೂ ಇವೆಯೇ ಎಂದು ಒಮ್ಮೊಮ್ಮೆ ಸಂಶಯ ಹುಟ್ಟುತ್ತದೆ. ದಾರಿದ್ರ್ಯ, ಅಜ್ಞಾನ, ಅನಾರೋಗ್ಯ ಮುಂತಾದ ಸಮಸ್ಯೆಗಳು, ಸಂಕಷ್ಟಗಳು ತುಂಬಿ ತುಳುಕುತ್ತಿರುವ ದೇಶ ನಮ್ಮದು. ಈ ದುರವಸ್ಥೆ ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರ ಕಾಲದಲ್ಲಿ ಹೇಗಿತ್ತೋ ಇಂದಿಗೂ ಹಾಗೆಯೇ ಉಳಿದುಕೊಂಡಿದೆ; ಅದರ ಪ್ರಮಾಣ ತಗ್ಗಿದೆ ಎನಿಸಿದರೂ, ವಿಪರೀತವಾಗಿ ಬೆಳೆದಿರುವ ಜನಸಂಖ್ಯೆಯನ್ನು ಗಮನಕ್ಕೆ ತಂದುಕೊಂಡರೆ, ಇನ್ನಷ್ಟು ಹೆಚ್ಚಿದೆ ಎಂದೇ ಹೇಳಬೇಕಾಗುತ್ತದೆ. ಆದ್ದರಿಂದ, ಶ್ರೀರಾಮಕೃಷ್ಣ, ವಿವೇಕಾನಂದರು ಅಂದು ಹೇಳಿದ್ದೆಲ್ಲ ಇಂದಿಗೂ ಅತ್ಯಂತ ಪ್ರಸ್ತುತವಾಗಿ ತೋರುತ್ತದೆ. ಅವರ ವಿಚಾರಧಾರೆಗೆ, ಸಂದೇಶಕ್ಕೆ ಮನಸ್ಸು ಕೊಡಬೇಕು ಮಾತ್ರವಲ್ಲ, ಅದನ್ನು ಅನುಷ್ಠಾನಕ್ಕೆ ತರಬೇಕು—ವ್ಯಷ್ಟಿಯ ಮತ್ತು ಸಮಷ್ಟಿಯ ಶ್ರೇಯಸ್ಸು ಮತ್ತು ಪ್ರೇಯಸ್ಸುಗಳ ಸಿದ್ಧಿಗಾಗಿ ಆ ಸಂದೇಶಕ್ಕೆ ಆಧ್ಯಾತ್ಮಿಕ ಮಹತ್ವ ಮಾತ್ರವಲ್ಲ, ಅಪಾರ ಸಾಮಾಜಿಕ ಮೌಲ್ಯವೂ ಉಂಟು.

**ಆತ್ಮನೋ ಮೋಕ್ಷಾರ್ಥಂ, ಜಗದ್ಧಿತಾಯ ಚ** ಎಂಬ ರಾಮಕೃಷ್ಣ ಮಹಾಸಂಘದ ಧ್ಯೇಯವಾಕ್ಯ ತುಂಬ ಪ್ರಾಮುಖ್ಯವುಳ್ಳದ್ದು; ಅರ್ಥಪೂರ್ಣವಾದುದು. ಸ್ವಂತ ಮೋಕ್ಷ, ಜಗತ್ತಿನ ಹಿತ—ಎರಡೂ ಪರಸ್ಪರ ಪೂರಕ ಮತ್ತು ಪ್ರೇರಕ. ಜಗತ್ತಿನ ಹಿತವನ್ನು ಕಡೆಗಣಿಸಿದ ಆತ್ಮಸಾಕ್ಷಾತ್ಕಾರದ ಹಂಬಲ ಸ್ವಾರ್ಥವಾಗಬಹುದು; ಭಗವಂತನನ್ನು ಮರೆತ ಲೋಕಹಿತಾಸಕ್ತಿ ಬೆಲೆಯಿಲ್ಲದ್ದಾಗಬಹುದು.

ಭಾರತೀಯ ಪರಂಪರೆಯಲ್ಲಿ ಉಪಕಾರ, ಸೇವೆ, ಮುಂತಾದ ಮಾತುಗಳಿಗೆ ಕೊರತೆಯೇನಿಲ್ಲ. **ಪರೋಪಕಾರಃ ಪುಣ್ಯಾಯ, ಪಾಪಾಯ ಪರಪೀಡನಂ** ಎಂಬ ನುಡಿ ಮಹಾಭಾರತದಲ್ಲೇ ಬರುತ್ತದೆ. ವಿಷಾದದ ಸಂಗತಿಯೇನೆಂದರೆ, ಇಂಥ ಹೇಳಿಕೆಗಳೆಲ್ಲ ಅಷ್ಟಾಗಿ ಕೃತಿರೂಪಕ್ಕಿಳಿಯಲಿಲ್ಲ; ಸಾಮೂಹಿಕವಾಗಿ ಅನುಷ್ಠಾನಗೊಂಡದ್ದಂತೂ ಇಲ್ಲವೇ ಇಲ್ಲ ಎನ್ನಬಹುದು. ಇದಕ್ಕೆ ಕಾರಣವಿಲ್ಲದಿಲ್ಲ. ಹಿಂದಿನವರು ಇಹಪರಗಳನ್ನು ಪರಸ್ಪರ ಸಂಬಂಧವಿಲ್ಲದ ಅಥವಾ ವಿರುದ್ಧವಾದ ಎರಡು ಪ್ರತ್ಯೇಕ ಘಟಕಗಳನ್ನಾಗಿ ಪರಿಗಣಿಸಿ, ಲೋಕದ ನಿರಾಕರಣಕ್ಕೆ ಅವಕಾಶ ಕಲ್ಪಿಸಿದರು. ಲೋಕವನ್ನು ನಿರಾಕರಿಸಿದಾಗ ಸೇವೆಯ ಪ್ರಶ್ನೆಯೆ ಉದ್ಭವಿಸುವುದಿಲ್ಲವಷ್ಟೆ. ಕೆಲವರಿಗಂತೂ ಅಧ್ಯಾತ್ಮವೆಂಬುದು ಇಹದ ಹೊರೆ ಹೊಣೆಗಳಿಂದ ಪಾರಾಗಿ ಪಲಾಯನಗೈದು ಹುದುಗಿಕೊಳ್ಳುವ ಆಶ್ರಯಸ್ಥಾನವಾಗಿ ಪರಿಣಮಿಸಿತು. ಇದರ ಫಲವೆಂದರೆ ರಾಷ್ಟ್ರದ ಒಂದು ದೊಡ್ಡ ವರ್ಗ ಹಿಂದುಳಿದದ್ದು. ಸ್ವಾಮಿ ವಿವೇಕಾನಂದರು ಹಿಂದೂಧರ್ಮದ ವಿಪರ್ಯಾಸವನ್ನು ಹೀಗೆ ತಿಳಿಸುತ್ತಾರೆ : 'ತಾತ್ತ್ವಿಕವಾಗಿ ನಾವೆಲ್ಲ ಒಂದು, ಸಮಾನರು ಎಂದೆವು.

**ಸೇವೆಯ ಸ್ಪಷ್ಟ ಕಲ್ಪನೆಯನ್ನು ನೀಡಿ, ಅದನ್ನು ಆಚರಣೆಗೆ ತಂದು, ಒಂದು ವ್ಯಾಪಕ ಕಳಕಳಿಯನ್ನಾಗಿ ಮೊದಲ ಬಾರಿಗೆ ಬೆಳೆಯಿಸಿದ ಕೀರ್ತಿ**
***ಶ್ರೀರಾಮಕೃಷ್ಣ, ವಿವೇಕಾನಂದರಿಗೆ ಸಲ್ಲಬೇಕು.***

ಆದರೆ ವ್ಯವಹಾರದಲ್ಲಿ ಇದನ್ನು ಒಂದಿನಿತೂ ಕಾರ್ಯರೂಪಕ್ಕೆ ತರದಾದೆವು.' 'ಪ್ರಪಂಚದಲ್ಲಿ ಮಾನವಾತ್ಮದ ಮಹಿಮೆಯನ್ನು ಹಿಂದೂಧರ್ಮದಷ್ಟು ಮತ್ತಾವ ಧರ್ಮವೂ ಉದಾತ್ತ ಭಾವನೆಗಳಿಂದ ಬೋಧಿಸಿಲ್ಲ. ಅಂತೆಯೇ ಮತ್ತಾವ ಧರ್ಮವೂ ಈ ಧರ್ಮದಂತೆ ಬಡವರ ಮತ್ತು ಕೆಳವರ್ಗದವರ ಕತ್ತಿನ ಮೇಲೆ ಸವಾರಿ ಮಾಡಿಲ್ಲ.' ಆದರೆ ತಪ್ಪು ಹಿಂದೂಧರ್ಮದ್ದಲ್ಲ, ಅದರ ಅನುಯಾಯಿಗಳು ಎನಿಸಿಕೊಂಡವರದು ಎಂಬುದನ್ನೂ ಇಲ್ಲಿ ಮರೆಯಬಾರದು..

ಸೇವೆಯ ಸ್ಪಷ್ಟ ಕಲ್ಪನೆಯನ್ನು ನೀಡಿ, ಅದನ್ನು ಆಚರಣೆಗೆ ತಂದು, ಒಂದು ವ್ಯಾಪಕ ಕಳಕಳಿಯನ್ನಾಗಿ ಮೊದಲ ಬಾರಿಗೆ ಬೆಳೆಯಿಸಿದ ಕೀರ್ತಿ ಶ್ರೀರಾಮಕೃಷ್ಣ, ವಿವೇಕಾನಂದರಿಗೆ ಸಲ್ಲಬೇಕು ಎಂದರೆ ಉತ್ಪ್ರೇಕ್ಷೆಯಾಗಲಾರದು. ಸ್ವಾಮಿ ವಿವೇಕಾನಂದರಂತೂ ಸೇವೆಯೆ ಪೂಜೆ, ದೇಶಸೇವೆಯೇ ಈಶಸೇವೆ ಎಂದು ಮೇಲಿಂದ ಮೇಲೆ ಒತ್ತಿ ಹೇಳಿದ್ದಾರೆ. ಅವರೇನೋ ಉಜ್ವಲವಾಗಿ ಸಿಂಹಕಂಠದಿಂದ ಸೇವಾ ತತ್ತ್ವವನ್ನು ಸಾರಿದ್ದಾರೆ. ಆದರೆ ಪರಮಹಂಸರು ಅದನ್ನೆಲ್ಲ ಎಲ್ಲಿ ಹೇಳಿದ್ದಾರೆ, ಆ ಪಾರಲೌಕಿಕ ಸಂನ್ಯಾಸಿಗೆ ಸಾಮಾಜಿಕ ದೃಷ್ಟಿ ಎಲ್ಲಿಂದ ಬರಬೇಕು ಎಂಬ ಆಶಂಕೆ ಕೆಲವರಲ್ಲಿ ತಲೆಯೆತ್ತಬಹುದು. ಆದರೆ ಅದಕ್ಕೆ ಸ್ವಲ್ಪವೂ ಜಾಗವಿಲ್ಲ. ನಾವು ನೆನಪಿಡಬೇಕು, ಸ್ವಾಮಿ ವಿವೇಕಾನಂದರ ಮೂಲಬಲ ಶ್ರೀರಾಮಕೃಷ್ಣರು ಎಂಬ ಸತ್ಯವನ್ನು. ವಿವೇಕಾನಂದರು ತಾವೇನು ಹೇಳಿದ್ದಾರೊ ಅದೆಲ್ಲ ಬೀಜರೂಪದಲ್ಲಿ ಶ್ರೀರಾಮಕೃಷ್ಣರಲ್ಲೆ ಗೋಚರಿಸುತ್ತದೆ. ಪರಮಹಂಸರ ಭೂಮವಾದ ಬದುಕಿಗೆ ವ್ಯಾಖ್ಯಾನವಾಗಿದೆ, ಸ್ವಾಮೀಜಿಯವರ ಭವ್ಯೋಜ್ವಲ ವಾಣಿ.

-೨-

ಶ್ರೀರಾಮಕೃಷ್ಣರು ಸಾಮಾನ್ಯರೂಪದಲ್ಲಿ ಕಾಣಿಸಿಕೊಂಡ ಪೂರ್ಣಾವತಾರ. ಈ ಹೇಳಿಕೆ ವಿರೋಧಾಭಾಸವೆನಿಸಿದರೂ, ಕೇವಲ ಸತ್ಯ. ಅದೊಂದು ಮಾನವೀಯವಾದ ಅರ್ವಾಚೀನ ಅವತಾರ; ಈ ಯುಗದ ಅಗತ್ಯಗಳಿಗೆ, ಸವಾಲುಗಳಿಗೆ ಅನುಗುಣವಾಗಿ ಮೈವೆತ್ತದ್ದು. ಯುಗಧರ್ಮಾನುಸಾರವಾಗಿ ಅವತರಿಸಿದ್ದು ಮಾತ್ರವಲ್ಲದೆ, ಯುಗದ ಮೇಲೆ ತಮ್ಮ ವಿಶಿಷ್ಟಪ್ರಭಾವಮುದ್ರೆಯನ್ನು ಒತ್ತಿದ ಮಹಾಮಹಿಮರು, ಶ್ರೀರಾಮಕೃಷ್ಣರು. ಈ ಯುಗವಾದರೂ ಎಂತಹದು? ಸಾಮಾನ್ಯರ ಯುಗ, ವೈಜ್ಞಾನಿಕ ಯುಗ. ಸಮನ್ವಯ, ಸರ್ವೋದಯಗಳು ಇದರ ಶ್ವಾಸಕೋಶಗಳು. ಶ್ರೀರಾಮಕೃಷ್ಣರ ಜೀವನದಲ್ಲಿ ಮತ್ತು ಪ್ರವಚನದಲ್ಲಿ ಸಾಮಾನ್ಯತೆ, ಸರ್ವೋದಯ, ಸಮನ್ವಯ ಹಾಗೂ ವೈಜ್ಞಾನಿಕತೆಗಳನ್ನು ವಿಸ್ಮಯಭಂಗಿಯಿಂದ ಎದುರುಗೊಳ್ಳುತ್ತೇವೆ. (ಎಲ್ಲವನ್ನೂ ಪರೀಕ್ಷೆಗೊಳಪಡಿಸುವುದು ವೈಜ್ಞಾನಿಕ ಮನೋಭಾವ. ಈ ನಿಲುವಿನಿಂದಲೆ ಪರಮಹಂಸರು ದೈವಸಾಕ್ಷಾತ್ಕಾರ ಮಾಡಿಕೊಂಡರು. ಅಷ್ಟೇ ಅಲ್ಲ, ತಮ್ಮನ್ನು ಇತರರು ಪರೀಕ್ಷಿಸಬೇಕೆಂಬುದು ಅವರ ಆಶಯವಾಗಿತ್ತು; ಹೀಗೆ ಪರೀಕ್ಷಿತರಾದಾಗ, ಅವರು ಸಂತೋಷಗೊಳ್ಳುತ್ತಿದ್ದರು.)

ಅತ್ಯಂತ ಉದಾರವಾದದ್ದು ಶ್ರೀರಾಮಕೃಷ್ಣರ ವ್ಯಕ್ತಿತ್ವ. ಅದರಲ್ಲಿ ಸರ್ವಧರ್ಮಸಮನ್ವಯ ಹೇಗೆ ಕಂಡುಬರುತ್ತದೆ ಎಂಬುದು ಪ್ರಸಿದ್ಧವಾದ ವಿಷಯ. (ಈ ಸಮನ್ವಯ ಒಂದು ಆಧ್ಯಾತ್ಮಿಕ ದಿಗ್ವಿಜಯ ಕೂಡ. ಎಲ್ಲ ತತ್ತ್ವಗಳನ್ನೂ ಒಂದಾದ ಮೇಲೊಂದರಂತೆ ಆಕ್ರಮಿಸಿ ವಶಪಡಿಸಿಕೊಂಡರು ಮತ್ತು ಅರಗಿಸಿಕೊಂಡರು ಪರಮಹಂಸರು. ತಮ್ಮ ಶಿಷ್ಯರನ್ನು ಅವರವರ ಸ್ವಭಾವ, ಅಭಿರುಚಿಗಳಿಗೆ ತಕ್ಕಂತೆ ಬೆಳೆಯಲು ಬಿಟ್ಟುದೂ ಅವರ ಔದಾರ್ಯಕ್ಕೆ ಸಾಕ್ಷಿಯಾಗುವ ಸಂಗತಿ. ಸಮನ್ವಯ ಎಂದರೆ ಸ್ವಾತಂತ್ರ್ಯದ ಹರಣವಲ್ಲ.)

ಅಲ್ಲದೆ, ಐಹಿಕ-ಪಾರಮಾರ್ಥಿಕಗಳ ಸಮನ್ವಯವನ್ನೂ ನಮಗದು ಅಪೂರ್ವ ರೀತಿಯಲ್ಲಿ ತೋರಿಸಿಕೊಡುತ್ತದೆ. ಮುಕ್ತಿಗೆ ಸಂನ್ಯಾಸ ಅನಿವಾರ್ಯವೆಂದು ಪರಮಹಂಸರು ಹೇಳಲಿಲ್ಲ; ಸಂಸಾರದಲ್ಲಿದ್ದುಕೊಂಡೇ ವ್ಯಕ್ತಿ ಭಗವತ್ ಸಾಕ್ಷಾತ್ಕಾರ ಪಡೆಯಬಹುದೆಂಬುದು ಅವರ ಉಪದೇಶ. ಯಾರಾದರೂ ಒಂದು ವೇಳೆ ಸಂನ್ಯಾಸ ಸ್ವೀಕಾರ ಮಾಡುವುದಾದ ಪಕ್ಷದಲ್ಲಿ, ಸಂಸಾರದ ಜವಾಬ್ದಾರಿಗಳನ್ನು ಪೂರೈಸಿಬರಬೇಕೆಂದು ಅವರು ಹೇಳುತ್ತಾರೆ. ಹೀಗಾಗಿ, ಲೋಕಪುರಸ್ಕಾರ ಪರಮಹಂಸರಲ್ಲಿ ನಾವು ಕಾಣುವ ಒಂದು ವಿಶೇಷ. ಅದರಿಂದ ಸೇವಾತತ್ತ್ವ ಸಹಜವಾಗಿಯೇ ನಿಷ್ಪನ್ನವಾಗುತ್ತದೆ. ಒಟ್ಟಿನಲ್ಲಿ ಆತ್ಮಸಾಕ್ಷಾತ್ಕಾರ, ಲೋಕಸಂಗ್ರಹ ಎರಡಕ್ಕೂ ಸಮಪ್ರಾಧಾನ್ಯವೀಯುತ್ತಾರೆ, ಶ್ರೀರಾಮಕೃಷ್ಣರು. ಅವರ ದೃಷ್ಟಿ ವ್ಯವಹಾರವಿಮುಖವಲ್ಲ.

ಸೇವಾತತ್ತ್ವದ ಬೇರು ಇರತಕ್ಕದ್ದು ಅದ್ವೈತದಲ್ಲಿ. ಎಲ್ಲರಲ್ಲೂ ಭಗವಂತನಿದ್ದಾನೆ, ಎಲ್ಲರೂ ಭಗವದಂಶಗಳೇ ಎಂಬ ಅರಿವು ಮೂಡಿದಾಗ, ಮಾನವ ಸೇವೆಯ ಮೂಲಕ ಮಾತ್ರವೇ ದೇವರ ಸಾಕ್ಷಾತ್ಕಾರ ಸಾಧ್ಯ ಎಂಬ ಸತ್ಯ ಸ್ವಯಂವೇದ್ಯವಾಗುತ್ತದೆ. ಕಡೆಯಪಕ್ಷ, ಸಹಜೀವಿಗಳ ಸೇವೆ ಈಶ್ವರಲಾಭದ ಸುಲಭತಮ ವಿಧಾನ ಅಥವಾ ಸಮರ್ಥವಾದ ವಿಧಾನ ಎಂಬುದನ್ನೊಪ್ಪಬೇಕು. ಆದರೆ ನಾಸ್ತಿಕನ ಸೇವೆಯ ಕಲ್ಪನೆ ಅಷ್ಟೇನೂ ದೃಢವಾದುದಲ್ಲ. ಲೌಕಿಕವಾದ ನೆಲೆಯಲ್ಲಿ, ಬರಿಯ ಅನುಕಂಪ ಅಥವಾ ಕನಿಕರದಿಂದ ಕೈಗೊಳ್ಳುವ ಸೇವೆ ತಾತ್ಕಾಲಿಕ ಮಾತ್ರವಾಗಬಹುದು; ದೈವೀ ಪ್ರಜ್ಞೆಯ ಹಿನ್ನೆಲೆಯಿಲ್ಲದೆ ಸೇವೆ ಪ್ರಚ್ಛನ್ನ ಸ್ವಾರ್ಥವಾಗುವ ಸಂಭವವೂ ಉಂಟು. ನಿಜವಾದ ಸೇವೆ ಹಾರ್ದಿಕ ಮಾತ್ರವಲ್ಲ; ಬೌದ್ಧಿಕವಾದ ತಳಕಟ್ಟು ಕೂಡ ಅದಕ್ಕಿರಬೇಕು. 'ವಿಚಾರವಿಲ್ಲದ ಭಕ್ತಿ ವಿನಾಶಕಾರಿ' ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದ ಮಾತು

ಸೇವೆಗೂ ಅನ್ವಯಿಸುತ್ತದೆ. (ಕಟ್ಟಾ ನಾಸ್ತಿಕನೊಬ್ಬ ಅಂತಃಕರಣಪೂರ್ವಕವಾಗಿ ಸೇವಾಮಗ್ನನಾಗಿದ್ದರೆ, ಅವನ ಸೇವೆಯನ್ನು ಕೀಳ್ಗಳೆಯಬೇಕಾಗಿಲ್ಲ. ಅವನ ಅಂತಃಕರಣ, ಮಾನವೀಯತೆಗಳೇ ದೇವರು ಎಂದು ಹೇಳಬೇಕಾಗುತ್ತದೆ. ದೇವರೆಂದರೆ ಒಳಿತು, ಶಿವ ಅಲ್ಲವೆ?)

ಸೇವೆಯ ಬಗೆಗೆ ಶ್ರೀರಾಮಕೃಷ್ಣರ ವಿಚಾರಗಳನ್ನು ಮೊದಲು ಗಮನಿಸಬಹುದು. 'ದೇವರನ್ನು ಅರಸುವುದಾದರೆ, ಮನುಷ್ಯರಲ್ಲಿ ಅರಸು' ಎಂಬ ಅವರ ಉಕ್ತಿ ಸೂತ್ರವತ್ತಾಗಿದೆ. 'ಒಬ್ಬ ಮನುಷ್ಯನಿಗೆ ನೆರವಾಗಲು ಇಪ್ಪತ್ತು ಸಾವಿರ ಶರೀರಗಳನ್ನು ಬೇಕಾದರೂ ತ್ಯಜಿಸುತ್ತೇನೆ' ಎಂದು ಅವರೊಮ್ಮೆ ಘೋಷಿಸುತ್ತಾರೆ. 'ಉಪಕಾರ' ಎಂಬ ಪದ ಪರಮಹಂಸರಿಗೆ ಅಸಹನೀಯವಾಗಿತ್ತು. ಅದರ ಸ್ಥಾನದಲ್ಲಿ 'ಸೇವೆ' ಎಂಬ ಪದವನ್ನು ಅವರು ಪ್ರತಿಷ್ಠಾಪಿಸುತ್ತಾರೆ. ಏಕೆಂದರೆ, 'ಉಪಕಾರ'ದಲ್ಲಿ ಅಹಂಭಾವವಿದೆ ; 'ಸೇವೆ'ಯಾದರೋ ನಮ್ರತೆಯ ದ್ಯೋತಕ. ಸರ್ವಾಂತರ್ಯಾಮಿಯಾದ ಭಗವಂತನಿಗೆ ಯಾರೂ ಉಪಕಾರ ಮಾಡುವುದು ಶಕ್ಯವಿಲ್ಲ; ಅವನಿಗೆ ಯಾರ ಉಪಕಾರದ ಅಗತ್ಯವೂ ಇಲ್ಲ. ಆದ್ದರಿಂದ, ಮಾಡಬೇಕಾದ ಕೆಲಸವನ್ನು ಸೇವೆ ಎಂದುಕೊಂಡು ಮಾಡಬೇಕು. ಇತರರಿಗೆ ಕರುಣೆ ತೋರಬೇಕು ಎಂದು ಯಾರಾದರೂ ಹೇಳಿದಾಗಲೂ ಪರಮಹಂಸರು ಪ್ರತಿಭಟಿಸುತ್ತಿದ್ದರು: 'ಕರುಣೆ ತೋರಲು ನೀನು ಯಾರು? ನೀನೊಂದು ಕೀಟ ಮಾತ್ರ. ನಿನ್ನಿಂದ ಸೇವೆಯಷ್ಟೆ ಸಾಧ್ಯ!' ಎನ್ನುತ್ತಿದ್ದರು.



ಸಾಮಾನ್ಯರೂಪದಲ್ಲಿ ಕಾಣಿಸಿಕೊಂಡ ಪೂರ್ಣಾವತಾರ ಶ್ರೀರಾಮಕೃಷ್ಣ
(*ಕೇಶವಚಂದ್ರಸೇನನ ಮನೆಯಲ್ಲಿ ಸಮಾಧಿಸ್ಥರಾಗಿ*)

ಶ್ರೀರಾಮಕೃಷ್ಣರು ಸೇವೆಯ ಬಗೆಗೆ ಬೋಧಿಸುತ್ತಿದ್ದರೆಂದಷ್ಟೆ ಭಾವಿಸಬಾರದು; ಅವರ ಸ್ವಂತ ಬದುಕು ಸೇವೆಗೊಂದು ಮೇಲ್ಪಂಕ್ತಿಯಾಗಿತ್ತು. ಸ್ವಾಮಿ ಶಿವಾನಂದರ ಒಂದು ಹೇಳಿಕೆಯನ್ನು ನೋಡಬೇಕು: 'ಅಷ್ಟೊಂದು ನಿರ್ಲಿಪ್ತನಂತೆ ತೋರುತ್ತಿದ್ದ ಈ ವ್ಯಕ್ತಿ ಜನರ ದುಃಖ ದುರಿತಗಳ ಕತೆಗಳನ್ನು ಹೇಗೆ ಅತ್ಯಾಸಕ್ತಿಯಿಂದ ಆಲಿಸುತ್ತಿದ್ದರು, ಹೇಗೆ ಅವರಿಗೆ ಸಾಂತ್ವನ ನೀಡಿ ಅವರ ಹೃದಯಗಳನ್ನು ಹಗುರಗೊಳಿಸುತ್ತಿದ್ದರು ಎಂಬುದನ್ನು ಕಣ್ಣಾರೆ ನೋಡದಿದ್ದವರು ಕಲ್ಪಿಸಿಕೊಳ್ಳುವುದೂ ಅಸಾಧ್ಯ.'

ಚಂಡಾಲನೊಬ್ಬನ ಶೌಚಗೃಹವನ್ನು ಶ್ರೀರಾಮಕೃಷ್ಣರು ತಮ್ಮ ತಲೆಗೂದಲಿಂದ ಸ್ವಚ್ಛಗೊಳಿಸಿದ ಸಂಗತಿ ಅವರ ಸೇವಾದರ್ಶಕ್ಕೊಂದು ಜ್ವಲಂತ ನಿದರ್ಶನ. (ಸ್ವಾಮಿಗಳೊಬ್ಬರು ಹೇಳಿದಂತೆ, ಶತಶತಮಾನಗಳಿಂದ ಮೇಲುವರ್ಗದವರು ಕೆಳವರ್ಗದವರಿಗೆ ಮಾಡಿದ ಅನ್ಯಾಯದ ಪರಿಮಾರ್ಜನೆಯನ್ನು ಈ ಘಟನೆ ಸಂಕೇತಿಸುತ್ತದೆ ಎಂದೂ ಇಟ್ಟುಕೊಳ್ಳಬಹುದು.) ಅವರು ಒಮ್ಮೆ ಪ್ರವಾಸದಲ್ಲಿದ್ದಾಗ, ಕ್ಷಾಮಪೀಡಿತ ಸಂತಾಲರ ನಡುವೆ ಅಳುತ್ತಾ ಕುಳಿತು, ಅವರ ಹೊಟ್ಟೆ ಬಟ್ಟೆಗಳಿಗೆ ಮಥುರನಾಥ ವ್ಯವಸ್ಥೆ ಮಾಡಿದ ಹೊರತು ಮುಂದಕ್ಕೆ ಕದಲುವುದಿಲ್ಲವೆಂದು ಸತ್ಯಾಗ್ರಹ ಹೂಡಿದರೆಂಬುದನ್ನು ಅಗತ್ಯವಾಗಿ ಸ್ಮರಿಸಬೇಕು.

ಪರಮಹಂಸರು ಸದಾ ಬ್ರಹ್ಮವಿಹಾರಿಯಾಗಿದ್ದವರು; ಸಮಾಧಿಯೇ ಅವರ ಸಹಜ ಸ್ಥಿತಿಯಾಗಿತ್ತು. ಅಂಥವರು ಕಾರ್ಯಕ್ಷೇತ್ರದಲ್ಲಿ ಹೆಚ್ಚೇನೂ ಮಾಡುವುದು ಸಾಧ್ಯವಿರಲಿಲ್ಲ. ಆದರೆ ತಮ್ಮ ಶಿಷ್ಯರಿಂದ ಲೋಕಸಂಗ್ರಹ ಮಾಡಿಸುವುದು ಅವರ ಸಂಕಲ್ಪವಾಗಿತ್ತು; ಎಂತಲೇ ಅವರ ಬರವಿಗಾಗಿ ಕಾತರಿಸುತ್ತಿದ್ದರು. ಆ ಮಹಾಚೇತನ ವಿವೇಕಾನಂದರನ್ನು ತನ್ನ ಪ್ರಮುಖ ಉಪಕರಣವನ್ನಾಗಿ ಮಾಡಿಕೊಂಡಿತು.

ನಿರ್ವಿಕಲ್ಪ ಸಮಾಧಿಯ ಇಚ್ಛೆಯನ್ನು ನರೇಂದ್ರ ವ್ಯಕ್ತಪಡಿಸಿದಾಗ, ಶ್ರೀರಾಮಕೃಷ್ಣರು ಛೀಮಾರಿ ಹಾಕುತ್ತಾರೆ: 'ಮತ್ತೆ ಮತ್ತೆ ಅದೇ ಕತೆ! ನಿನಗೆ ನಾಚಿಕೆಯಾಗದೆ? ಇಷ್ಟು ಕಾಲ ಮಹಾವಟವೃಕ್ಷದಂತೆ ಬೆಳೆದಿರುವೆ. ಸಾವಿರಾರು ಜನರಿಗೆ ಶಾಂತಿಛಾಯೆಯನ್ನು ನೀನು ನೀಡಬೇಕಾಗಿದೆ. ಅದನ್ನು ಬಿಟ್ಟು ಮುಕ್ತಿಗಾಗಿ ಬಾಯಿಬಾಯಿ ಬಿಡುತ್ತಿದ್ದೀಯಲ್ಲ! ಎಂತಹ ಕ್ಷುದ್ರ ಆದರ್ಶ ನಿನ್ನದು!' ನರೇಂದ್ರನಿಗೆ ನಿರ್ವಿಕಲ್ಪ ಸಮಾಧಿಯ ಅನುಭವವಾದ ಬಳಿಕ ಪರಮಹಂಸರು ಹೇಳುತ್ತಾರೆ : 'ನಿನಗೀಗ ಜಗನ್ಮಾತೆ ಎಲ್ಲವನ್ನೂ ತೋರಿಸಿಬಿಟ್ಟಿದ್ದಾಳೆ. ಆದರೆ ಸದ್ಯಕ್ಕೆ ನಿನ್ನ ಅನುಭವಕ್ಕೆ ಬೀಗಮುದ್ರೆ ಹಾಕಿದೆ. ಬೀಗದ ಕೈ ನನ್ನ ಕೈಯಲ್ಲಿರುತ್ತದೆ. ಮಾತೆಯ ಕಾರ್ಯಗಳನ್ನೆಲ್ಲಾ ನೀನು ಮಾಡಿ ಮುಗಿಸಿದ ಮೇಲೆ ಬೀಗ ತೆಗೆಯುತ್ತೇನೆ!' ಭವತಾರಿಣಿಯನ್ನು ಅವರು ಯಾಚಿಸಿದರಂತೆ: 'ಅಮ್ಮಾ, ಅವನ ನಿರ್ವಿಕಲ್ಪಾನುಭೂತಿಯ ಮೇಲೆ ನಿನ್ನ ಮಾಯಾವರಣವನ್ನು ದಯಮಾಡಿ ಬೀಸು. ಅವನಿಂದ ನಾನು ಮಾಡಿಸಬೇಕಾದ ಕೆಲಸ ಬಹಳವಿದೆ!'

ತಮ್ಮ ಮಹಾಸಮಾಧಿಯ ಪೂರ್ವದಲ್ಲೂ ಇಂಥದೇ ಮಾತನ್ನು ವಿವೇಕಾನಂದರಿಗೆ ಆಡುತ್ತಾರೆ, ಪರಮಹಂಸರು: 'ಇಂದು ನಿನಗೆ ನನ್ನ ಸರ್ವಸ್ವವನ್ನೂ ದಾನಮಾಡಿದ್ದೇನೆ. ನಾನಿನ್ನುಮೇಲೆ ದರಿದ್ರ ಫಕೀರನಂತೆ! ಈ ಶಕ್ತಿಯಿಂದ ನೀನು ಲೋಕಕ್ಕೆ ಮಹದುಪಕಾರ ಮಾಡುವೆ. ಎಲ್ಲವನ್ನೂ ಮಾಡಿ ಮುಗಿಸಿದ ಮೇಲೆಯೇ ನಿನಗೆ ಹಿಂದಿರುಗಲು ಸಾಧ್ಯವಾಗುತ್ತದೆ.'

ಇದನ್ನೆಲ್ಲ ನೋಡಿದರೆ, ಶ್ರೀರಾಮಕೃಷ್ಣರ ಇಚ್ಛಾವ್ಯೂಹ ಏನಿತ್ತೆಂಬುದು ಒಂದಿನಿತೂ ಅಸ್ಪಷ್ಟವಾಗಿ ಉಳಿಯುವುದಿಲ್ಲ. ಅದಕ್ಕೆ ತಮ್ಮನ್ನು ಕೈದುವಾಗಿಸಿಕೊಂಡು, ಗುರುದೇವನ ಕನಸುಗಳಿಗೆ ಆಕಾರ

ಕೊಡುವ ಕಾರ್ಯವನ್ನು ಸ್ವಾಮಿ ವಿವೇಕಾನಂದರು ಅದ್ಭುತವಾಗಿ ಮಾಡುತ್ತಾರೆ. (ಶ್ರೀರಾಮಕೃಷ್ಣರು ನರೇಂದ್ರನನ್ನು ಮೊದಲ ಬಾರಿಗೆ ಕಂಡಾಗಲೇ ಆಡಿದ ಮಾತುಗಳನ್ನು ನೆನೆಯಬೇಕು: 'ದೇವಾ, ನೀನು ನಾರಾಯಣನ ಅಂಶವಾದ ನರಮಹರ್ಷಿ ಎಂಬುದನ್ನು ನಾನು ಬಲ್ಲೆ. ಜಗತ್ತಿನ ದುಃಖ ಪರಿಹಾರಕ್ಕಾಗಿ ಅವತರಿಸಿದ್ದೀಯೆ!')

-೩-

ಸ್ವಾಮಿ ವಿವೇಕಾನಂದರ ಜೀವನವೊಂದು ಸೇವೆಯ ಮಹಾಗಾಥೆ. ಅದರ ಮೂರ್ತರೂಪವೇ ಶ್ರೀರಾಮಕೃಷ್ಣ ಮಹಾಸಂಘ. ಅದರ ಅಂಗಸಂಸ್ಥೆಗಳು ಜಗತ್ತಿನಾದ್ಯಂತ ನಿರ್ವಹಿಸುತ್ತಿರುವ ಕಾರ್ಯಕ್ರಮಗಳನ್ನು ನೋಡಿದರೆ ಸಾಕು, ಸೇವೆಯೆಂದರೆ ಏನೆಂಬುದರ ಅರಿವಿಗೆ.



ಸ್ವಾಮಿ ವಿವೇಕಾನಂದರ ಜೀವನವೊಂದು ಸೇವೆಯ ಮಹಾಗಾಥೆ. ಅದರ ಮೂರ್ತರೂಪವೇ ಶ್ರೀರಾಮಕೃಷ್ಣ ಮಹಾಸಂಘ.

'ದರಿದ್ರ ನಾರಾಯಣ' ಎಂಬ ನವ ದೇವತೆಯೊಂದನ್ನು ಕಂಡುಹಿಡಿದುದು ವಿವೇಕಾನಂದರು ಮಾಡಿದ ದೊಡ್ಡ ಕೆಲಸ; ಭರತಖಂಡದ ಇತಿಹಾಸದಲ್ಲೇ ಅದೊಂದು ಮಹತ್ತ್ವದ ಸಂಶೋಧನೆ. ಆದರೆ ಈ ದೇವರನ್ನು ಅವರು ಪ್ರತಿಷ್ಠಾಪಿಸಿದ್ದು ಮೊದಲೇ ಇದ್ದ ಮೂವತ್ತುಮೂರು ಕೋಟಿ ದೇವತೆಗಳ ಜೊತೆಗಲ್ಲ, ಬದಲು! ಈ ದರಿದ್ರನಾರಾಯಣನ ಸೇವೆಯೇ ಶ್ರೀಮನ್ನಾರಾಯಣನ ಸೇವೆ ಎಂದು ಸಾರಿದರು, ವಿವೇಕಾನಂದರು. ನಿಷ್ಕಾಮ ಕರ್ಮವೇ ತಪಸ್ಸು; ಸೇವೆಯೇ ಸ್ವರ್ಗ, ಮೋಕ್ಷ.

ಯುಗವಾಣಿಯನ್ನು—ಅದು ದೇವವಾಣಿಯೂ ಹೌದು—ನಿಸ್ಸಂದಿಗ್ಧವಾಗಿ ಗುರುತಿಸಿದವರು ಸ್ವಾಮೀಜಿ : 'ಮತ್ತೊಮ್ಮೆ ಯುಗ ಚಕ್ರವು ಮೇಲ್ಮುಖವಾಗಿ ತಿರುಗುತ್ತಿದೆ... ದೇವರ ಆದೇಶ ಹೊರ ಹೊರಟಿದೆ. ಭಾರತವು ಏಳಲೇಬೇಕು. ಜನಸಾಮಾನ್ಯರು ಮತ್ತು ಬಡವರು ಏಳಲೇಬೇಕು.'; 'ತೂರ್ಯವಾಣಿಯೊಂದು ಕೇಳಿ ಬರುತ್ತಿದೆ—ಜ್ಞಾನ, ಭಕ್ತಿ, ಕರ್ಮ, ವೈರಾಗ್ಯ, ಸೇವಾತತ್ತ್ವಗಳನ್ನು ಉಚ್ಚ ಕಂಠದಿಂದ ಸಾರುವ ತೂರ್ಯವಾಣಿಯೊಂದು ಕೇಳಿಬರುತ್ತಿದೆ.'

ಜನಕೋಟಿಯ ಮೂಲಭೂತ ಆವಶ್ಯಕತೆಗಳನ್ನು ಮೊದಲು ಪೂರೈಸಬೇಕು. 'ಜನಸಮೂಹ ಸರಿಯಾದ ಆಹಾರವನ್ನೂ ಒಳ್ಳೆಯ ವಿದ್ಯಾಭ್ಯಾಸವನ್ನೂ ಸರಿಯಾದ ಆರೈಕೆಯನ್ನೂ ಪಡೆಯುವವರೆಗೂ ಯಾವುದೇ ಬಗೆಯ ರಾಜಕೀಯವೂ ವ್ಯರ್ಥವಾಗುತ್ತದೆ.' ತಾರಸ್ವರದಿಂದ ಘೋಷಿಸುತ್ತಾರೆ ವಿವೇಕಾನಂದರು : 'ಭರತಖಂಡದ ಉದ್ಧಾರಕ್ಕಾಗಿ ಕೋಟಿಜನ್ಮಗಳನ್ನೆತ್ತಿ ಬರುವೆನು. ದರಿದ್ರನಾರಾಯಣನ ಸೇವೆಗಾಗಿ ನನ್ನ ಸ್ವಂತ ಮುಕ್ತಿಯನ್ನೀಡಾಡುವೆನು. ಜಗತ್ತಿನಲ್ಲಿ ಕ್ರಿಮಿಯೊಂದು ಕಷ್ಟದಲ್ಲಿರುವವರೆಗೆ ನಾನು ಸುಖವನ್ನು ಬಯಸೆನು. ದರಿದ್ರ ದೇವೋ ಭವ! ಮೂರ್ಖ ದೇವೋ ಭವ! ಪಾಪಿದೇವೋ ಭವ! ಮೂರ್ಖರೆನ್ನ ದೇವರು! ದರಿದ್ರರೆನ್ನ ದೇವರು! ಪಾಪಿಗಳೆನ್ನ ದೇವರು!—ನಾನವರ ಸೇವೆಗಾಗಿ ನನ್ನಾತ್ಮವನ್ನೂ ಧಾರೆಯೆರೆಯುವೆನು!' 'ದರಿದ್ರ ದೇವೋ ಭವ!' ಇತ್ಯಾದಿಗಳು ಸ್ವಾಮೀಜಿ ಕೊಟ್ಟ ನೂತನ 'ಮಂತ್ರದೀಪ'ಗಳು. 'ರೋಗಿಯ ರೂಪದಲ್ಲಿ, ಹುಚ್ಚರ ರೂಪದಲ್ಲಿ, ಕುಷ್ಠ ಹಿಡಿದವನ ರೂಪದಲ್ಲಿ, ಪಾಪಿಯ ರೂಪದಲ್ಲಿ ಬಂದು ಭಗವಂತ ಸೇವೆಗೆ ಅವಕಾಶ ಮಾಡಿಕೊಡುತ್ತಾನೆ' ಎಂಬ ಮಾತು ಕೂಡ ಗಮನಾರ್ಹವಾದುದು.

ದೇವಾಲಯದಲ್ಲಿರುವ ಕಲ್ಲಿನ ದೇವರನ್ನು ಪೂಜಿಸಿ ಪ್ರಯೋಜನವಿಲ್ಲ; ನಮ್ಮ ಸುತ್ತ ಮುತ್ತ ಹಿಂದೆ ಮುಂದೆ ಇರುವ ಅಸಂಖ್ಯ ಜೀವಂತ ದೇವತೆಗಳನ್ನು ಸೇವೆಯ ಮೂಲಕ ಪೂಜಿಸಬೇಕು ಎಂದು ಕರೆ ಕೊಡುತ್ತಾರೆ, ಸ್ವಾಮೀಜಿ: 'ಮಂದಿರ ಮತ್ತು ಪ್ರತಿಮೆಗಳಲ್ಲಿರುವ ಭಗವಂತನನ್ನು ಹೊರಗೆಳೆದು, "ಯತ್ರ ಜೀವಃ ತತ್ರ ಶಿವಃ" ಮಂತ್ರದಿಂದ "ವಿರಾಟ್" ಪೂಜೆಗೆ ಅನುವಾಗಬೇಕು. ಪ್ರಾಚೀನಕಾಲದ ಸಂನ್ಯಾಸಿಗಳಂತೆ ಗಿರಿ ಗುಹೆ ಕುಟೀರಗಳಲ್ಲಿ ವಾಸಮಾಡುತ್ತ ಕೇವಲ ಆತ್ಮಸಾಕ್ಷಾತ್ಕಾರಲಂಪಟರಾಗಿ ಮಾತ್ರ ಇರಬಾರದು. ಸಂಸಾರದ ಕರ್ಮಕ್ಷೇತ್ರದಲ್ಲಿ ಎದೆಗೊಟ್ಟು ನಿಂತು, ಮಾನವರನ್ನು ಉತ್ತಮ ಕಾರ್ಯಗಳಿಗೆ ಪ್ರೇರಿಸಬೇಕು. ಕೋಟಿ ಕೋಟಿ ವ್ಯಕ್ತಿಗಳ ಹೃದಯದ ಅಜ್ಞಾನಾಂಧಕಾರವನ್ನು ದೂರಮಾಡಬೇಕು.' ಮತ್ತೆ ಒತ್ತಿ ನುಡಿಯುತ್ತಾರೆ : 'ಇನ್ನೊಂದು ನೂರು ವರ್ಷಗಳವರೆಗೆ ನಿಮ್ಮ ದೇವ ದೇವತೆಗಳನ್ನೆಲ್ಲ ಮನಸ್ಸಿನಿಂದ ತಳ್ಳಿಬಿಡಿ. ನಮ್ಮ ಭಾರತಾಂಬೆಯೇ ನಮ್ಮ ದೇವರಾಗಲಿ!'

ಭಗವದ್ಧ್ಯಾನ ಜಪತಪಗಳೇ ಸರ್ವಸ್ವ ಎಂದು ಬಗೆದಿದ್ದ ಸೋದರ ಸಂನ್ಯಾಸಿಗಳಿಗೆ ಜನಸೇವಾದೀಕ್ಷೆಯನ್ನಿತ್ತು, ಅವರನ್ನು ಕರ್ಮರಂಗಕ್ಕೆ ಅಣಿಗೊಳಿಸಿದ್ದು ವಿವೇಕಾನಂದರ ಅಸಾಧಾರಣ ಸಾಧನೆಯೆ ಸರಿ. ಅವರು ನವಸಂನ್ಯಾಸದ ಧ್ಯೇಯೋಕ್ತಿಗಳೆಂದು ವೈರಾಗ್ಯ, ಬ್ರಹ್ಮಚರ್ಯ, ತಪಸ್ಸು ಮತ್ತು ಸೇವೆಯನ್ನು ಪ್ರತಿಪಾದಿಸುತ್ತಾರೆ.

ಜನಸಾಮಾನ್ಯರ ಶಿಕ್ಷಣದ ಮೇಲೆ ಸ್ವಾಮೀಜಿ ವಿಶೇಷ ಒತ್ತು ಹಾಕುತ್ತಾರೆ. ಜನರನ್ನು ಸಾಕ್ಷರರನ್ನಾಗಿಸುವುದೇ ಅವರ ಉತ್ಕರ್ಷದ ಅಡಿಗಲ್ಲು ಎಂಬುದು ಇಂದಿಗೂ ಪರಮಸತ್ಯ. ವಿವೇಕಾನಂದರು ಹೇಳುತ್ತಾರೆ : 'ಕೆಳವರ್ಗದ ಜನರ ವ್ಯಕ್ತಿತ್ವವನ್ನು ಶಿಕ್ಷಣದ ಮೂಲಕ ಪುನಃ ಕೊಡಮಾಡುವುದೇ ಅವರಿಗೆ ಮಾಡಬೇಕಾದ ಏಕೈಕ ಸೇವೆ.'

ಹೀಗೆಲ್ಲ ಹೇಳುವಾಗ 'ಎಲ್ಲವೂ ಧರ್ಮದ ಮೂಲಕ ಬರಬೇಕು' ಎಂಬುದನ್ನು ಮರೆಯುವುದಿಲ್ಲ ವಿವೇಕಾನಂದರು. 'ಭಾರತವನ್ನು ಸಮಾಜವಾದಿ ಅಥವಾ ರಾಜಕೀಯ ಭಾವನೆಗಳ ಪ್ರವಾಹದಿಂದ ತುಂಬುವ ಮೊದಲು ಆಧ್ಯಾತ್ಮಿಕ ಭಾವನೆಗಳ ಮಹಾಪೂರದಿಂದ



೧೮೯೭ರ ಮೇ ೧ರಂದು, ರಾಮಕೃಷ್ಣ ಮಿಷನ್ನಿನ ಪ್ರಥಮ ಸಭೆ ನಡೆದ ಬಲರಾಮ ಬೋಸರ ಗೃಹ

ತುಂಬಿರಿ' ಎಂಬುದು ಅವರ ಸ್ಮರಣೀಯ ಸಂದೇಶ.

ಆದರೆ ಅಧ್ಯಾತ್ಮಕ್ಕೆ ಮೊದಲು ಅನ್ನದ ವ್ಯವಸ್ಥೆಯಾಗಬೇಕು, ಜನಕ್ಕೆ. ಹಸಿದ ಹೊಟ್ಟೆಗೆ ಅಧ್ಯಾತ್ಮದಿಂದ ಉಪಯೋಗವಿಲ್ಲ. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು ಮುಡಿಯಿರಿ ಎಂದು ಹೇಳಿದವರೇ ಬಹಳ ಮಂದಿ. ಆದರೆ ವಿವೇಕಾನಂದರಿಗೆ ಇದು ಸರ್ವಥಾ ಅಸಮ್ಮತ. ಅವರು ಕಟುವಾಗಿ ನುಡಿಯುತ್ತಾರೆ : 'ಹಸಿವೆಯಿಂದ ಬಳಲಿ ಸಾಯುತ್ತಿರುವ ಜನಾಂಗಕ್ಕೆ ಧರ್ಮೋಪದೇಶ ಮಾಡುವುದು ಮಹಾ ನೀಚಕಾರ್ಯ. ಹಸಿದವರಿಗೆ ವೇದಾಂತ ಬೋಧಿಸುವುದು ಅಧಮಾಧಮ ಪಾಪ.'

**ಕೆಳವರ್ಗದ ಜನರ ವ್ಯಕ್ತಿತ್ವವನ್ನು ಶಿಕ್ಷಣದ ಮೂಲಕ ಪುನಃ ಕೊಡಮಾಡುವುದೇ ಅವರಿಗೆ ಮಾಡಬೇಕಾದ ಏಕೈಕ ಸೇವೆ.**

ಸ್ವಾಮೀಜಿಯವರ ಅತಿಶಯವಾದ ಅನುಕಂಪ, ಸಹಾನುಭೂತಿಗಳಿಗೆ ಸಮೀಚೀನ ನಿದರ್ಶನಗಳಾಗಿ ಅವರ ಬದುಕಿನ ಕೆಲವು ಸಂಗತಿಗಳನ್ನು ಲಕ್ಷಿಸಬಹುದು. ಕಲ್ಕತ್ತದಲ್ಲಿ ಒಬ್ಬ ಹಸಿವಿನಿಂದ ಸತ್ತನೆಂಬ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿದ ಸ್ವಾಮೀಜಿ ಎದೆನೊಂದು 'ಅಯ್ಯೋ! ನನ್ನ ದೇಶವೇ!' ಎಂದು ನಿಡುಸುಯ್ದರಂತೆ. ಅಮೆರಿಕೆಯ ಒಂದು ಭವ್ಯ ಸೌಧದಲ್ಲಿ ಒಂದಿರುಳು ಅವರು ಸುಪ್ಪತ್ತಿಗೆಯ ಮೇಲೆ ಮಲಗಿದ್ದಾಗ, ತಾಯ್ನಾಡಿನ ನೆನಪಾಯಿತಂತೆ. ಆಗ ಅವರು ಅಳುತ್ತ ನೆಲದ ಮೇಲೆ ಕುಳಿತು, 'ಹೇ ಜಗಜ್ಜನನಿ! ನನ್ನ ಮಾತೃಭೂಮಿ ಬಡತನದಲ್ಲಿ ಬಿದ್ದು ನರಳುತ್ತಿರುವಾಗ, ನನಗೆ ಕೀರ್ತಿಯಿಂದ ಆಗಬೇಕಾದುದೇನು? ಅಯ್ಯೋ! ನಮಗೆಂತಹ ದುರವಸ್ಥೆಯೊದಗಿದೆ! ಒಂದು ತುತ್ತು ಕೂಳಿಗೆ ಗತಿಯಿಲ್ಲವಲ್ಲ! ಇಲ್ಲಿಯಾದರೋ ಜನ ಐಶ್ವರ್ಯದಲ್ಲಿ ಓಲಾಡುತ್ತಿದ್ದಾರೆ. ಭಾರತೀಯರನ್ನು ಮೇಲೆತ್ತುವವರಾರು? ಹಸಿದವರಿಗೆ ಅನ್ನ ನಿಕ್ಕುವವರಾರು? ಹೇ ಜಗಜ್ಜನನಿ, ನಮಗೆ ದಾರಿ ತೋರು!' ಎಂದು ಪ್ರಾರ್ಥಿಸುತ್ತ, ಇರುಳನ್ನು ಕಳೆದರಂತೆ. ಭರತಖಂಡದ ದುರವಸ್ಥೆ ಅವರನ್ನು ಹಾಸಿಗೆಯ ಮೇಲೆ ನೆಮ್ಮದಿಯಿಂದ ಮಲಗಗೊಡಲಿಲ್ಲ!

ಕರ್ಮತತ್ತ್ವದ ದುರುಪಯೋಗ ಬಹುಮಂದಿ ಭಾರತೀಯರನ್ನು ಸೇವಾವಿಮುಖರನ್ನಾಗಿಸಿದೆ. ಯಾರಾದರೂ ಸಂಕಟಗ್ರಸ್ತರಾದಾಗ, ಅವರ ನೆರವಿಗೆ ಧಾವಿಸುವ ಬದಲು, 'ಅದು ಅವರ ಪೂರ್ವಾರ್ಜಿತ ಕರ್ಮ; ನಾವೇನು ಮಾಡಲಾದೀತು?' ಎಂದು ಉದ್ಗರಿಸುವುದು ನಮ್ಮ ಪದ್ಧತಿಯಾಗಿ ಹೋಗಿದೆ. ಈ ಪ್ರವೃತ್ತಿಯನ್ನು ಖಂಡಿಸುತ್ತಾರೆ, ವಿವೇಕಾನಂದರು.

ಕಲ್ಕತ್ತ ನಗರದಲ್ಲಿ ಪ್ಲೇಗ್ ರೋಗ ಹರಡಿದಾಗ, ಪರಿಹಾರಕಾರ್ಯಗಳಿಗಾಗಿ ಹಣ ಎಲ್ಲಿದೆ ಎಂಬ ಪ್ರಶ್ನೆ ಉದ್ಭವಿಸಿತು. ಆಗ ಸ್ವಾಮೀಜಿ ಹೇಳಿದರು : 'ಮಠದ ಭೂಮಿಯನ್ನು ಮಾರಿಬಿಡೋಣ. ಮನುಷ್ಯರಿಗಿಂತ ನೆಲ ಹೆಚ್ಚಿನದಲ್ಲ.'

ತಾನು ಕೋಣೆಯ ಬಾಗಿಲು ಮುಚ್ಚಿ, ವಿವಿಕ್ತವಾಗಿ ಜಪತಪಾದಿಗಳನ್ನು ಕೈಕೊಂಡರೂ, ದೇವರ ಸಾಕ್ಷಾತ್ಕಾರವಾಗಲಿಲ್ಲವೆಂದು ಒಮ್ಮೆ ಶಿಷ್ಯನೊಬ್ಬ ದೂರಿದ. ಅವನಿಗೆ ವಿವೇಕಾನಂದರು ಹೀಗೆ ಬುದ್ಧಿ ಹೇಳಿದರು: 'ಮಗು, ಮೊದಲು ಕೊಠಡಿಯ ಬಾಗಿಲುಗಳನ್ನು ತೆರೆದು ಕಣ್ಣು ಬಿಟ್ಟು, ಹೊರಗೆ ನೋಡು. ಕಣ್ಣು ಮುಚ್ಚಿಕೊಳ್ಳುವುದರಿಂದ ಏನೂ ಫಲವಿಲ್ಲ. ನಿನ್ನ ನೆರೆಹೊರೆಯಲ್ಲಿ ಬೇಕಾದಷ್ಟು ಮಂದಿ ದರಿದ್ರರೂ ಅನಾಥರೂ ದುಃಖಿಗಳೂ ಇದ್ದಾರೆ. ಅವರಿಗೆ ನೆರವಾಗು. ಹೊಟ್ಟೆಗಿಲ್ಲದವರಿಗೆ ಅನ್ನದಾನ ಮಾಡು. ಬಟ್ಟೆಯಿಲ್ಲದವರಿಗೆ ವಸ್ತ್ರದಾನ ಮಾಡು. ರೋಗಿಗಳಿಗೆ ಶುಶ್ರೂಷೆ ಮಾಡು. ಮೂರ್ಖರಿಗೆ ವಿದ್ಯೆ ಕಲಿಸು. ಆಗ ನಿನಗೆ ಶಾಂತಿ ಲಭಿಸುವುದು.' ಸೇವೆಯ ಎಲ್ಲ ಪ್ರಕಾರಗಳನ್ನೂ ಸ್ವಾಮೀಜಿ ಇಲ್ಲಿ ಸಂಗ್ರಹಿಸಿದ್ದಾರೆ.

ದಶಕಗಳ ಹಿಂದೆಯೇ ಸ್ವಾಮೀಜಿ ಪ್ರವಾದಿಯಂತೆ ಆಡಿದ ಮಾತೊಂದನ್ನು ಇಂದು ಅಗತ್ಯವಾಗಿ ನೆನೆಯಬೇಕು: 'ಇಂದು ಕಾಲ ಬದಲಾಗಿದೆ. ಕೆಳವರ್ಗದವರು ಸಾವಕಾಶವಾಗಿ ತಮ್ಮ ಶೋಷಣೆಯನ್ನು ಅರಿತು ಎಚ್ಚರಗೊಳ್ಳುತ್ತಿದ್ದಾರೆ... ಮೇಲುವರ್ಗದವರು ಕೆಳಗಿನವರನ್ನು ದಮನ ಮಾಡಲು ಇನ್ನು ಎಷ್ಟೇ ಪ್ರಯತ್ನಿಸಿದರೂ ಸಮರ್ಥರಾಗಲಾರರು. ಕೆಳಗಿನವರಿಗೆ ನ್ಯಾಯವಾಗಿ ದೊರಕಬೇಕಾದ ಹಕ್ಕುಗಳನ್ನು ಪಡೆಯಲು ಸಹಾಯ ಮಾಡುವುದರಲ್ಲೇ ಮೇಲುವರ್ಗದವರ ಶುಭ ಅಡಗಿದೆ.' ಇದು ಹಿತವಚನವೂ ಹೌದು, ಎಚ್ಚರಿಕೆಯೂ ಹೌದು. ಈ ಪ್ರವಾದಿವಾಣಿಯನ್ನು ಅರ್ಥ ಮಾಡಿಕೊಂಡು, ಆ ದಿಶೆಯಲ್ಲಿ ಪ್ರಯತ್ನಪರರಾಗುವುದೇ ಶ್ರೀರಾಮಕೃಷ್ಣ, ವಿವೇಕಾನಂದರಿಗೆ ಸಲ್ಲಿಸಬಹುದಾದ ಪರಮಗೌರವ.

'ದೀನದಲಿತರ ನೋವಿಗೆ ಯಾರು ಮರುಗುತ್ತಾರೊ ಅವರೇ ಮಹಾತ್ಮರು; ಉಳಿದವರೆಲ್ಲ ದುರಾತ್ಮರು' ಎಂಬುದು ಸ್ವಾಮಿ ವಿವೇಕಾನಂದರ ಒಂದು ಸೂತ್ರಸದೃಶ ಉಕ್ತಿ. ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು ಮತ್ತು ಶ್ರೀಮಾತೆ ಶಾರದಾದೇವಿಯವರು ನೂರಕ್ಕೆ ನೂರರಷ್ಟು ಮಹಾತ್ಮರು. ಅವರ ಅನುಗ್ರಹ, ಆಶೀರ್ವಾದ ನಮ್ಮ ಮೇಲಿರಲಿ. ❄